**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,
ಉಡುಪಿ ಜಿಲ್ಲೆ , ಉಡುಪಿ.**

**ಸೆಷನ್ಸ್ ಕೇಸ್ ನಂಃ 26/2017** **ಫ್ರಾ.ಸಾ.35**
**ಚಾಸಾ.50**

ಸಾಕ್ಷಿದಾರರ ಹೆಸರು - ಡಾ. ಗೀತಾ ಲಕ್ಷ್ಮೀ ಪಿ.
ಗಂಡನ ಹೆಸರು - ಡಾ. ಸತ್ಯಮೂರ್ತಿ ಕುಂಬ್ಳೆ
ವಯಸ್ಸು - 50 ವರ್ಷ
ಉದ್ಯೋಗ - ಸಹಾಯಕ ನಿರ್ದೇಶಕರು ಜೀವ ಶ್ಯಾಸ್ತ ವಿಭಾಗ, ಮಂಗಳೂರು
ವಿಳಾಸ - ಆರ್ ಎಫ್ ಎಸ್ ಎಲ್, ಮಂಗಳೂರು

ದಿನಾಂಕಃ 31-01-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. (ವೀಡಿಯೋ ಕಾನ್ಪರೆನ್ಸ್ ಮೂಲಕ)

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:**

1. ನಾನು 2004 ರಿಂದ ವಿವಿಧ ಹುದ್ದೆಗಳಲ್ಲಿ ಆರ್. ಎಫ್. ಎಸ್. ಎಲ್, ಮಂಗಳೂರು ಇಲ್ಲಿ ಜೀವಶ್ಯಾಸ್ತ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದೇನೆ.

ದಿನಾಂಕ 07-01-2017 ರಂದು ತನಿಖಾಧಿಕಾರಿಯ ಮನವಿಯ ಮೇರೆಗೆ ಹಿರಿಯಡ್ಕ ಪೋಲಿಸ್ ಠಾಣೆಗೆ ಭೇಟಿ ನೀಡಿ ಈ ಪ್ರಕರಣದಲ್ಲಿ ಪೋಲಿಸರು ಅಮಾನತ್ತುಪಡಿಸಿಕೊಂಡಿರುವ ಇಟಿಯೋಸ್ ಕಾರು ಸಂಖ್ಯೆ :ಕೆಎ-20-ಝಡ್-7580 ನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ ಅದರ ಡಿಕ್ಕಿಯ ಮ್ಯಾಟ್ ನಲ್ಲಿ ರಕ್ತದಂತೆ ಕಾಣುವ ಕಲೆಗಳು ಕಂಡುಬಂದಿರುತ್ತದೆ. ಸದ್ರಿ ಕಾರಿನಲ್ಲಿ ಕಾರಿನ ಡಿಕ್ಕಿ ಮತ್ತು ಇತರ ಭಾಗಗಳಿಂದ ಈ ಕೆಳಕಂಡ ಸ್ವತ್ತುಗಳನ್ನು ಸಂಗ್ರಹಿಸಿರುತ್ತೇನೆ.

1. Blood swab from the floor of the dickey of car ETIOS ತುಂಬಿದ ಕವರ್-1
2. Bloord swabs from the well of the dickey of car ತುಂಬಿದ ಕವರ್-1

3. Blood stained cutting from the floor of the dickey of car ತುಂಬಿದ ಕವರ್-1

4. Blood stained cotton thread pieces from the back seat rod of the car ತುಂಬಿದ ಕವರ್-1

5. Control Cotton ತುಂಬಿದ ಕವರ್-1

6. Control cutting from dickey ತುಂಬಿದ ಕವರ್-1

7. Blue mate from the dickey of car ತುಂಬಿದ ಕವರ್-1

ಸದ್ರಿ 7 ಸ್ವತ್ತುಗಳನ್ನು ತನಿಖಾಧಿಕಾರಿ ಸೀಲು ಮಾಡಿ ಕ್ರಮ ಸಂಖ್ಯೆ ನೀಡಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದ್ರಿ ಸ್ವತ್ತುಗಳನ್ನು ನೋಡಿದಲ್ಲಿ ಗುರುತಿಸುತ್ತೇನೆ. ಸದ್ರಿ ಸ್ವತ್ತುಗಳನ್ನು ಈಗ ನೋಡುತ್ತಿದ್ದು ಎಂಓ-9 ರಿಂದ 15 ಎಂದು ಗುರುತಿಸಲಾಯಿತು. ಈ ಬಗ್ಗೆ ತನಿಖಾಧಿಕಾರಿಗೆ ಒಂದು ವರದಿ ನೀಡಿರುತ್ತೇನೆ. ಸದ್ರಿ ವರದಿಯನ್ನು ಈಗ ನೋಡುತ್ತಿದ್ದು, ನಿಪಿ-83 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-83(ಎ) ಎಂದು ಗುರುತಿಸಲಾಯಿತು.

2. ದಿನಾಂಕ 28-01-2017 ರಂದು ಹಿರಿಯಡ್ಕ ಪೋಲಿಸ್ ಠಾಣಾ ಅಪರಾಧ ನಂ. 1/2017 ಕ್ಕೆ ಸಂಬಂಧಿಸಿದಂತೆ 9 ಸೀಲು ಮಾಡಿದ ವಸ್ತುಗಳನ್ನು ಮಹಿಳಾ ಪಿಸಿ-2050 ಇವರು ತಂದು ಪರೀಕ್ಷೆಗಾಗಿ ಪ್ರಯೋಗಾಲಯದಲ್ಲಿ ಹಾಜರುಪಡಿಸಿರುತ್ತಾರೆ. ಸದ್ರಿ ಸ್ವತ್ತುಗಳು ಕಳುಹಿಸಿದ ವಸ್ತುಗಳು ಸುಸ್ಥಿತಿಯಲ್ಲಿದ್ದವು. ಅವುಗಳ ಮೇಲಿರುವ ಮೊಹರುಗಳು ಕಳುಹಿಸಿದ ಮಾದರಿ ಮೊಹರಿ ನೊಂದಿಗೆ ತಾಳೆಯಾಗುತ್ತಿತ್ತು. 9 ಸೀಲು ಮಾಡಿದ ಸ್ವತ್ತುಗಳನ್ನು ಪ್ರಯೋಗಾಲಯದಲ್ಲಿ ತೆರೆದು ನೋಡಿದಾಗ ಕ್ರಮ ಸಂಖ್ಯೆ 1 ರಲ್ಲಿ ಶರ್ಟ್ ಇದ್ದು ತನಿಖಾಧಿಕಾರಿ ಅದಕ್ಕೆ ಇ ಎಂದು ಗುರುತು ನೀಡಿರುತ್ತಾರೆ. ಕ್ರಮ ಸಂಖ್ಯೆ-2 ರಲ್ಲಿ ಒಂದು ಬೈರಾಸು ಇದ್ದು ತನಿಖಾಧಿಕಾರಿ ಅದಕ್ಕೆ ಎಫ್ ಎಂದು ಗುರುತು ನೀಡಿರುತ್ತಾರೆ. ಕ್ರಮ ಸಂಖ್ಯೆ-3 ರಲ್ಲಿ ಮೂರು ಪ್ಲಾಸ್ಟಿಕ್ ಬ್ಯಾಗ್ ಗಳು ಇದ್ದು ತನಿಖಾಧಿಕಾರಿ ಅದಕ್ಕೆ ಜಿ ಎಂದು ಗುರುತು ನೀಡಿರುತ್ತಾರೆ. ಕ್ರಮ ಸಂಖ್ಯೆ-4 ರಲ್ಲಿ ಕಬ್ಬಿಣದ ರಾಡ್ ಇದ್ದು ತನಿಖಾಧಿಕಾರಿ ಅದಕ್ಕೆ ಎಸ್-1 ಎಂದು ಗುರುತು ನೀಡಿರುತ್ತಾರೆ. ಕ್ರಮ ಸಂಖ್ಯೆ-5 ರಲ್ಲಿ ಒಂದು ಚೂರಿ ಇದ್ದು ತನಿಖಾಧಿಕಾರಿ ಅದಕ್ಕೆ ಎಸ್-2 ಎಂದು ಗುರುತು ನೀಡಿರುತ್ತಾರೆ. ಕ್ರಮ ಸಂಖ್ಯೆ-6 ರಲ್ಲಿ ಒಂದು ಮಚ್ಚು ಇದ್ದು ತನಿಖಾಧಿಕಾರಿ ಅದಕ್ಕೆ ಎಸ್-3 ಎಂದು ಗುರುತು ನೀಡಿರುತ್ತಾರೆ. ಕ್ರಮ ಸಂಖ್ಯೆ-

7, 8, 9 ರಲ್ಲಿ ಕಬ್ಬಿಣದ ಚೈನ್ ಇದ್ದು ತನಿಖಾಧಿಕಾರಿ ಅವುಗಳಿಗೆ ಎಸ್-4, ಎಸ್-5 ಮತ್ತು ಎಸ್ -6 ಎಂದು ಗುರುತು ನೀಡಿರುತ್ತಾರೆ.

3.ಈ ಎಲ್ಲಾ ಸ್ವತ್ತುಗಳನ್ನು ಪರೀಕ್ಷೆಗೆ ಒಳಪಡಿಸಿದ್ದು ಕ್ರಮ ಸಂಖ್ಯೆ -ಇ, ಎಫ್, ಜಿ, ಎಸ್-1, ಎಸ್-3, ಎಸ್-4 ರಲ್ಲಿ ರಕ್ತದ ಕಲೆಗಳು ಕಂಡುಬಂದಿದ್ದು ಎಸ್-2, ಎಸ್-5, ಎಸ್-6 ನಲ್ಲಿ ಯಾವುದೇ ರಕ್ತದ ಕಲೆಗಳು ಕಂಡುಬಂದಿರುವುದಿಲ್ಲ. ಈ ಎಲ್ಲಾ ಸ್ವತ್ತುಗಳನ್ನು ಸೆರಾಲಜೀ ಪರೀಕ್ಷೆಗೆ ಒಳಪಡಿಸಿದ್ದು ಇ, ಎಫ್, ಜಿ, ಎಸ್-1, ಎಸ್-3, ಎಸ್-4 ರಲ್ಲಿ ಇರುವ ರಕ್ತದ ಕಲೆಗಳ ಗುಣಲಕ್ಷಣಗಳು ನಾಶವಾಗಿರುವುದರಿಂದ ಅದರ ಮೂಲವನ್ನು ಗುರುತಿಸಲು ಆಗುವುದಿಲ್ಲ. ಈ ಬಗ್ಗೆ ಎಫ್.ಎಸ್.ಎಲ್. ವರದಿ ಮತ್ತು ಸೆರಾಲಜಿಕಲ್ ವರದಿ ನೀಡಿರುತ್ತೇನೆ. ಎಫ್.ಎಸ್.ಎಲ್. ವರದಿಯನ್ನು ನಿಪಿ-84 ಎಂದು ಸಾಕ್ಷಿಯ ಸಹಿಯನ್ನು ನಿಪಿ-84(ಎ) ಎಂದು ಗುರುತಿಸಲಾಯಿತು. ಸೆರಾಲಜಿಕಲ್ ವರದಿಯನ್ನು ನಿಪಿ-85 ಎಂದು ಸಾಕ್ಷಿಯ ಸಹಿಯನ್ನು ನಿಪಿ-85(ಎ) ಎಂದು ಗುರುತಿಸಲಾಯಿತು. ನಾನು ಪರೀಕ್ಷೆಗೆ ಒಳಪಡಿಸಿದ ಸ್ವತ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಕಬ್ಬಿಣದ ಪೈಪು, ಸ್ಟೀಲಿನ ಚೂರಿ, ಕಬ್ಬಿಣದ ಮಚ್ಚು, ಕಬ್ಬಿಣದ ಸರಪಳಿಗಳನ್ನು ಮು.ಮಾ.2 ರಿಂದ 7 ಎಂದು ಗುರುತಿಸಲಾಗಿದೆ. ಶರ್ಟ್, ಬೈರಾಸು ಮತ್ತು ಪ್ಲಾಸ್ಟಿಕ್ ಬ್ಯಾಗ್‌ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.16, 17 ಮತ್ತು 18 ಎಂದು ಗುರುತಿಸಲಾಯಿತು. ಪರೀಕ್ಷೆಯ ನಂತರ ಎಲ್ಲಾ ಸ್ವತ್ತುಗಳನ್ನು ಪುನಃ ಸೀಲು ಮಾಡಿ ತನಿಖಾಧಿಕಾರಿಗೆ ಹಿಂತಿರುಗಿಸಿರುತ್ತೇನೆ. ಮಾದರಿ ಸೀಲನ್ನು ಈಗ ನೋಡುತ್ತಿದ್ದು, ನಿಪಿ-86 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಆರೋಪಿತರ ಪರ ವಕೀಲರಿಂದ**

ನಿಪಿ-83 ರಲ್ಲಿ ವಸ್ತುಗಳನ್ನು ಸಂಗ್ರಹಿಸಿದ ಅವಧಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಮು.ಮಾ.9 ರಿಂದ 15 ನ್ನು ಸಂಗ್ರಹಿಸಿಲ್ಲ ಎಂದರೆ ಸರಿಯಲ್ಲ. ಮು.ಮಾ.9 ರಿಂದ 15 ವಸ್ತುಗಳನ್ನು ನಾನು ಸೀಲು ಮಾಡಿಲ್ಲ ಆದರೆ ತನಿಖಾಧಿಕಾರಿ ಮಾಡಿರುತ್ತಾರೆ. ನಿಪಿ-71ರ ಮಹಜರು ಪ್ರಕ್ರಿಯೆಯಲ್ಲಿ ಭಾಗವಹಿಸಿಲ್ಲ ಎಂದರೆ ಸರಿಯಲ್ಲ. ನಿಪಿ-71 ಕ್ಕೆ ನಾನು ಸಹಿ ಮಾಡಿಲ್ಲ ಎಂದರೆ ಸರಿ. ನಿಪಿ-84 ರಲ್ಲಿ ನಮೂದಿಸಿರುವ ಮು.ಮಾ.2 ರಿಂದ 7 ಮತ್ತು 16 ರಿಂದ 18 ವಸ್ತುಗಳನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಯ ಕೋರಿಕೆ ಮೇರೆಗೆ ನಿಪಿ-83 ಮತ್ತು 84

ನ್ನು ಸ್ಪಷ್ಟನೆ ಮಾಡಿ ನೀಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿಯನ್ನು ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.